

ಮಾತು ತಡವರಿಸುತ್ತಿತ್ತು. ತನಗೇನೋ ಆಗುತ್ತಿದೆ ಎಂದುಕೊಂಡಳು

'ಹಲೋ ರಾಜುಮಾಮಾ, ನಾಳೆ ಬೆಳಿಗ್ಗೇನಾದರೂ ನಮ್ಮ ಮನೆಕಡೆ ಬರಬಹುದಾ? ಅಮ್ಮನೂ ವಿಚಾರಿಸ್ಲಿಕ್ಕೆ ಹೇಳಿದ್ರು' ಎಂದಳು.

ರಾಜಶೇಖರ್‌ಗೆ ತನ್ನ ಸೊಸೆಯೇ ಫೋನ್ ಮಾಡಿ ಕರೆದದ್ದು ತುಂಬ ಖುಷಿಯಾಯಿತು. 'ಖಂಡಿತ ಮಗೂ, ನಾಳೇನೆ ಬರ್ತೀನೆ, ನೀನೂ ಒಂದಿನ ರಜೆ ಮಾಡು, ಎಲ್ಲ ಇತ್ಯರ್ಥ ಮಾಡೇಬಿಡೋಣ' ಎಂದರು. ಭಾವನಾ ಮಾತು ಮುಂದುವರಿಸದೆ ಫೋನ್ ಸ್ವಿಚ್‌ಆಫ್



ಮಾಡಿ ಬ್ಯಾಗಿನ ಒಳಗಿಟ್ಟಳು. ತನ್ನ ಮದುವೆಯ ಕುರಿತು ಏನಾದರೂ ತುರ್ತು ಮಾತುಕತೆಯ ಅಗತ್ಯ ಬಿದ್ದಿರಬೇಕು ಎಂದುಕೊಂಡಿರಬಹುದು ರಾಜುಮಾಮ. ಯಾವುದಕ್ಕೂ ಬರಲಿ, ಆಮೇಲೆ ಹೇಳಿದರಾಯಿತು ಎಂದುಕೊಂಡಳು.

ಭಾವನಾಳಿಗೆ ತನ್ನ ಸಹೋದ್ಯೋಗಿಗಳ ಮುಖ ನೋಡಲು ಹೇಸಿಗೆ ಅನ್ನಿಸಿತು: ತಾನು ಇಷ್ಟೆಲ್ಲ ಮಾಡುತ್ತಿರುವುದು ತನಗಾಗಿ ಅಂದುಕೊಳ್ಳುತ್ತಾರಲ್ಲ ಈ ವಿಷಜಂತುಗಳು. ಇವರಿಗೂ ಬೋನಸ್ ಬರುತ್ತೆ, ಇವರಿಗೂ ಪ್ರಮೋಷನ್ ಬರುತ್ತೆ. ನಾಳೆ ಇವರೂ ನನಗಿಂತ ಎತ್ತರಕ್ಕೆ ಜಿಗಿಯಬಹುದು. ಇದ್ಯಾರಿಗೆ ಶೋಭೆ ತರುವ ಕೆಲಸ ಮಾಡ್ತಾರಿವರು? ಈಗಾಗಲೇ ಮೀಟಿಂಗ್ ಕರೆದು ಜಾಡಿಸಿಬಿಟ್ಟರೆ?

ಆಕೆಯ ಮನಸ್ಸು ಇಬ್ಭಾಗವಾಯಿತು. ಬೇಕು ಬೇಡಗಳ ನಡುವೆ ತುಯ್ದಾಡಿತು. ಒಂದು ದಿನ ಹೇಗೋ ಮನಸ್ಸನ್ನು ನಿಯಂತ್ರಿಸಿದರೆ ನಾಳೆ ಹೇಗೂ ರಾಜುಮಾಮ ಬರುತ್ತಾರಲ್ಲ. ಬರಲಿ, ಬಂದುಬಿಡಲಿ. ಇದನ್ನು ಎದುರಿಸಲೇ ಬೇಕು. ಹೀಗೆ ಬಿಟ್ಟರಾಗದು

ಜ್ಯೂಲಾ ನನ್ನ ಮೇಜಿನ ಹತ್ತಿರವೇ ಅಷ್ಟುಹೊತ್ತು ಯಾಕೆ ನಿಂತಿದ್ದಳು? ಅವಳ ಕೆಲಸ ಮುಗಿಸಿ ಹೊರಟುಹೋಗಬಹುದಿತ್ತಲ್ಲ? ಇಲ್ಲ; ಇದರಲ್ಲೇನೋ ಮಸಲತ್ತಿದೆ. ಇವರಿಗೊಂದು ಪಾಠ ಕಲಿಸಲೇಬೇಕು.

ಎಲ್ಲರೂ ಎದ್ದು ಹೋದಮೇಲೆ ಭಾವನಾ ಆ ಪಾರ್ಸೆಲನ್ನು ಟಿಫಿನ್ ಚೀಲಕ್ಕೆ ತುರುಕಿ ಕಾರಿನ ಕಡೆಗೆ ಹೊರಟಳು. ಗೇಟಿನಲ್ಲಿದ್ದ ಸೆಕ್ಯೂರಿಟಿ ಮೊಬೈಲ್ ನೋಡುತ್ತ ತಲೆತಗ್ಗಿಸಿ ಕುಳಿತಿದ್ದ: 'ಸೆಕ್ಯೂರಿಟಿ!' ಎಂದು ಅಬ್ಬರಿಸಿದ ರಭಸಕ್ಕೆ ಆತನ ಮೊಬೈಲ್ ಎಲ್ಲಿ ಬಿತ್ತೋ ಎಂದು ಅರಿವಿಗೆ ಬರುವುದಕ್ಕೆ ಮೊದಲೇ ಆ ಸಂಜೆಯಲ್ಲೂ 'ಗುಡ್ ಮಾರ್ನಿಂಗ್ ಮ್ಯಾಮ್' ಎಂದ.

ಕಾರಿನ ಬಾಗಿಲು ದಬ್ಬಿದ ರಭಸಕ್ಕೆ— ಹೊರಗಡೆ ನಿಂತು ಕಾಯುತ್ತಿದ್ದ ಕುಮುದಮ್ಮನಿಗೆ— ಮಗಳ ಜೊತೆ ಮಾತನಾಡುವ ಧೈರ್ಯ ಬರಲಿಲ್ಲ. ಆಕೆ ಅಮ್ಮನೊಂದಿಗೆ ಪಾರ್ಸೆಲ್ ಸುದ್ದಿಯನ್ನೇ ಎತ್ತಲಿಲ್ಲ. ರಾಜೂಮಾಮ ಬರುತ್ತಾರೆಂಬುದನ್ನು ಅಮ್ಮನಿಗೆ ತಿಳಿಸಲೂ ಇಲ್ಲ. ಅಕ್ಕನಿಗೆ ಫೋನೂ ಮಾಡಲಿಲ್ಲ. ತಲೆನೋವಿನ ನೆಪಹೇಳಿ ಒಂದು ಲೋಟ ಹಾಲಿನಲ್ಲಿ ಊಟ ಮುಗಿಸಿ ಮಲಗಿದಳು.

ಬೆಳಗ್ಗಿನ ಹೊತ್ತಲ್ಲಿ ಕರೆಗಂಟೆ ಸದ್ದಿಸಿದಾಗ ಕುಮುದಮ್ಮ ಹೋಗಿ ಬಾಗಿಲು ತೆರೆದರು. 'ಅರೆ, ರಾಜು, ಭಾನುವಾರ ಬರುತ್ತಿ ಅಂದಿದ್ಯಲ್ಲೋ. ಇಡ್ಲಿಗಾದರೂ ನೆನೆಸ್ತಿದ್ದೆ. ಅದ್ಯಾಕೋ ಹೇಳದೆ ಬಂದೆ. ಇವತ್ತು ಬರೀ ಅವಲಕ್ಕಿ ತಿನ್ಬೇಕು ನೋಡು.' ಕುಮುದಮ್ಮ ಅಲವತ್ತುಕೊಂಡಳು. ಅಪರೂಪಕ್ಕೆ ಬರುವ ತಮ್ಮನಿಗೆ ಕೈಲಾದ ಸತ್ಕಾರ ಮಾಡುವುದು ಕುಮುದಮ್ಮನಿಗೆ ಇಷ್ಟದ ವಿಚಾರ.

'ಯಾಕೆ? ಭಾವನಾ ಹೇಳ್ಲಿಲ್ವೆ?'

'ನಿನ್ನೆ ರಾತ್ರಿ ಬಂದವಳು ಒಂದು ಲೋಟ ಹಾಲು ಕುಡಿದು ಹೋಗಿ ಮಲಗಿದ್ದಾಳೆ. ಸ ಇಲ್ಲ ಸು ಇಲ್ಲ. ನನಗೆ ಮಾತನಾಡಿಸೋದಕ್ಕೇ ಭಯ ಆಯ್ತು. ಆಫೀಸು ಅವಳ ತಲೆ ಮೇಲೇ ಇರುತ್ತಲ್ಲ. ನಳಿನಾಗೆ ಫೋನು ಮಾಡೋಣಾಂತ ಅಂದ್ಕೊಂಡೆ. ಇವಳಿಗೆ ಗೊತ್ತಾದ್ರೆ ಅದಕ್ಕೂ ರಂಪ ಮಾಡ್ತಾಳೆ' ಎಂದು ಕುಮುದಮ್ಮ ಅಳುಮೋರೆ ಹಾಕಿದರು.

ಅಷ್ಟು ಹೇಳಬೇಕಿದ್ದರೆ ಭಾವನಾ ಹೊರಬಂದು, 'ರಾಜುಮಾಮ, ನಿಮ್ಮನ್ನೇ ಕಾಯ್ತಾ ಇದ್ದೆ. ಅಮ್ಮ, ರಾಜುಮಾಮನ ಜೊತೆ ಸ್ವಲ್ಪ ಮಾತಾಡ್ಲಿಕ್ಕಿದೆ. ನಾವು ಒಳಗಿರ್ತೇವೆ. ಬನ್ನಿ ಮಾಮ' ಎನ್ನುತ್ತಾ ಆಕೆ ಮುಂದೆ ನಡೆದಳು. ಪೊಲೀಸ್ ಪ್ರತಿಷ್ಠೆ ಬದಿಗಿಟ್ಟ ರಾಜು ತೆಪ್ಪಗೆ ಅವಳ ಹಿಂದೆ ನಡೆದರು. 'ಏನಾಯ್ತು ಮಗೂ, ನಿನ್ನೆ ನಿನ್ನ ಸ್ವರ ಕೇಳಿದಾಗಲೇ ಅಂದುಕೊಂಡೆ; ಬೇರೆ ಯಾವುದೋ ವಿಚಾರ ಹೇಳೋದಕ್ಕೆ ನನ್ನನ್ನು ಕರೀತಾ ಇದ್ದಿಯಾಂತ. ಹೇಳು, ಏನಾಯ್ತು?'

ಬಾಗಿಲು ಹಾಕಿಕೊಂಡು ಮಾವನನ್ನು ಕೂರಿಸಿಕೊಂಡಳು. ಕುಮುದಮ್ಮ ಗಾಬರಿಯಾದಳು. 'ಇದ್ಯಾಕೆ ಮಗಳು ಬಾಗಿಲು ಹಾಕಿಕೊಂಡಳು? ನನಗೆ ಗೊತ್ತಾಗಬಾರದ್ದು ಏನದು? ರಾಜು ಮುಖ ಕೂಡ ತೋರ್ಲಿಲ್ಲ. ಒಂದು ಕಪ್ ಕಾಫೀನಾದ್ರೂ ಕೊಡಬೇಕಾಗಿತ್ತು. ಮಾಡೋದೇನು?' ಕುಮುದಮ್ಮನಿಗೆ ಅಡುಗೆ ಮನೆಕಡೆಗೆ ಹೋಗಲು ಮನಸ್ಸಾಗಲಿಲ್ಲ. ಮುಚ್ಚಿದ ಬಾಗಿಲ ಪಕ್ಕದಲ್ಲೇ ನಿಂತುಕೊಂಡಳು.

ಭಾವನಾ ಕಂಪನಿಯಲ್ಲಿ ತನಗಾದ ಅವಮಾನವನ್ನು ಪೂರ್ಣವಾಗಿ ವಿವರಿಸಿದಳು. ಪಾರ್ಸೆಲನ್ನು ಬಿಡಿಸಿ ಅದರಲ್ಲಿದ್ದ ಮೂರು ಬ್ರಾ ಹಾಗೂ ಮೂರು ಲೇಡೀಸ್ ಅಂಡರ್ವೇರ್‌ಗಳನ್ನು ಹೊರತೆಗೆದು, 'ಇದು ನೋಡಿ ನನಗೆ ನನ್ನ ಸಹೋದ್ಯೋಗಿಗಳು ಕೊಟ್ಟ ಉಡುಗೊರೆ. ಈಗ ಹೇಳಿ ಮಾಮ, ನಾನೇನು ಮಾಡ್ಬೇಕೂಂತ. ನಾನು ಕಾನೂನು ರೀತ್ಯಾ ಹೋಗಬೇಕು. ಇವರಿಗೆಲ್ಲ ಒಂದು ಪಾಠ ಕಲಿಸ್ಲೇಬೇಕು. ಹೇಗೂ ಅವಮಾನ ಆಗಿದೆ. ಮುಂದಿನದನ್ನೂ ನಾನು ಸಹಿಸಿಕೊಳ್ತೇನೆ. ಇನ್ನು ನಾನು ಮುಂದುವರಿಯಬೇಕಾದ ದಾರಿ, ಅದನ್ನು ಹೇಳಿಕೊಟ್ಟರೆ ಸಾಕು.' ಭಾವನಾ ಹಿಂದಿನ ಸಾಯಂಕಾಲದಿಂದ ಹೊತ್ತುಕೊಂಡಿದ್ದ ಭಾರವನ್ನು ರಾಜೂಮಾಮನ ಎದೆಗಿಳಿಸಿ ತಟಸ್ಥಳಾದಳು.

ಅಷ್ಟರಲ್ಲಿ ನಳಿನಾಳ ಫೋನು: 'ಯಾಕೆ ಭಾವನಾ, ಫೋನ್ ಸ್ವಿಚ್‌ಆಫ್ ಮಾಡಿಟ್ಟಿದ್ದೆ! ನಿನ್ನೆ ಸಾಯಂಕಾಲದಿಂದ ಟ್ರೈ ಮಾಡ್ತಾ ಇದ್ದೇನೆ. ಈಗ ಸಿಕ್ತು ನೋಡು.'

ಭಾವನಾ ನಿರ್ವಿಕಾರವಾಗಿ 'ಯಾಕೆ? ಏನಾಯ್ತು?' ಎಂದಳು.

'ನಿನ್ನೆ ಸಾಯಂಕಾಲದೊಳಗೆ ನನ್ನದೊಂದು ಪಾರ್ಸೆಲ್ ಬರಬೇಕಾಗಿತ್ತು ಕಣೆ. ಯಾಕೆ ಬರಲಿಲ್ಲಾಂತ ಟ್ರ್ಯಾಕ್ ಮಾಡಿದಾಗಲೇ ಗೊತ್ತಾಯ್ತು ನೋಡು— ಕಳೆದ ವಾರ ಅಮ್ಮನಿಗೆ ದೋಸೆಕಾವಲಿ ಬುಕ್ ಮಾಡಿದ್ದಲ್ಲ— ಅದೇ ವಿಳಾಸಕ್ಕೆ ಹೋಗಿದೇಂತ. ಆಫೀಸಿನಲ್ಲಿ ಎಲ್ಲರೆದುರಿಗೆ ನೀನದನ್ನು ಬಿಚ್ಚಿ ನಗೆಪಾಟಲಿಗೆ ಗುರಿಯಾಗ್ಬೇಡಾಂತ ನಿನ್ನೆ ಸಾಯಂಕಾಲದಿಂದ ಫೋನ್ ಮಾಡ್ತಾ ಇದ್ದೆನೋಡು. ಬಂದಿದೆಯಲ್ವಾ? ಬಂದಿದ್ರೆ ಜೋಪಾನವಾಗಿ ತೆಗೆದಿಡು. ಅಮ್ಮನಿಗೂ ಹೇಳ್ಬೇಡ. ಯಾಕೆ ಅಂಥದ್ದನ್ನೆಲ್ಲ ಆನ್‌ಲೈನಲ್ಲಿ ತರಿಸ್ತೀಯಾಂತ ಕಿರಿಕಿರಿ ಮಾಡ್ತಾರೆ. ಮುಂದಿನ ವಾರ ನಾನು ಬರ್ತೀನಲ್ಲ. ಆಗ ತಗೊಳ್ತೇನೆ. ಕೇಳಿಸ್ತಾ ಕಣೆ!.'

***

'ಯಾಕೆ? ಏನಾಯ್ತು ಮಗೂ? ಏನಾಯ್ತು ಮಗೂ?' ರಾಜುಮಾಮಾ ಕೇಳುತ್ತಲೇ ಇದ್ದರು.

ಪ್ರತಿಕ್ರಿಯಿಸಿ: **feedback@sudha.co.in**